ಸಾಕ್ಷಿಯು ದಿನಾಂಕ- 05-11-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಹೆಚ್ ಅರ್ ಜೆ ವಕೀಲರಿಂದ -

ಈ ಪ್ರಕರಣದ ದಾಖಲು ಮಾಡುವಾಗ ದೂರುದಾರರ ರಿಕವರಿ ಮ್ಯಾನೇಜರ್ ಬಸವರಾಜ ಎನ್ನುವವರು ಇದ್ದರು ಎಂದರೆ ಸರಿ. ನಾನು ಅಗಸ್ಟ್ 2019 ರಂದು ದೂರುದಾರರಲ್ಲಿ ಮ್ಯಾನೇಜರ್ ಎಂದು ಕೆಲಸಕ್ಕೆ ಸೇರಿರುತ್ತೇನೆ. ಹಣ ವಸೂಲಾತಿ ಮಾಡುವುದು, ಹೊಸ ಗ್ರಾಹಕರವನ್ನು ಭೇಟಿಯಾಗುವುದು, ಕಚೇರಿ ನಿರ್ವಹಣೆ ನನ್ನ ಕೆಲಸಗಳಾಗಿರುತ್ತವೆ. ನನ್ನ ಕಚೇರಿಯ ಸಮಯ ಬೆಳ್ಳಿಗ್ಗೆ 9.30 ರಿಂದ ಸಂಜೆ 6 ಗಂಟೆಯವರೆಗೆ ಇರುತ್ತದೆ. ಆ ಆವಧಿಯಲ್ಲಿ ನಾನು ಹಣ ವಸೂಲಾತಿ ಮಾಡುವುದು ಮತ್ತು ನ್ಯಾಯಾಲಯದ ಕಲಾಪಗಳಲ್ಲಿ ಭಾಗವಹಿಸುವ ಕೆಲಸಗಳನ್ನು ಮಾಡುತ್ತೇನೆ ಎಂದರೆ ಸರಿ. ದೂರುಗಳನ್ನು ನಮ್ಮ ವಕೀಲರು ತಯಾರಿಸುತ್ತಾರೆ. ಅವರ ಹೆಸರು ರಮೇಶ ಕೋನರೆಡ್ಡಿ ಇರುತ್ತದೆ. ದೂರುದಾರರ ಸಂಸ್ಥೆ ಕೇವಲ ಚೀಟ್ ಫಂಡ್ಸ್ ವ್ಯವಹಾರ ಮಾಡುತ್ತದೆ ಎಂದರೆ ಸರಿಯಲ್ಲ. ಹಣಕಾಸು ವ್ಯವಹಾರವನ್ನು ಮಾಡುತ್ತದೆ.

2. ಆರೋಪಿ ನಮ್ಮ ಸಂಸ್ಥೆಯಲ್ಲಿ ಚೀಟಿ ವ್ಯವಹಾರ ಮಾಡಿದ್ದರು. ಆರೋಪಿಯ 2020 ಜುಲೈ ತಿಂಗಳಲ್ಲಿ ನಮ್ಮ ಸಂಸ್ಥೆಗೆ ಸದಸ್ಯರಾಗಿ ಸೇರಿದ್ದರು. ಅಕ್ಟೋಬರ್ 2020 ರಲ್ಲಿ ಬಿಡ್ ಆಗಿದ್ದು ಆರೋಪಿಯು ಬಿಡ್ ನಲ್ಲಿ ಭಾಗವಹಿಸಿ ಹಣವನ್ನು ನವೆಂಬರ್ 2020 ರಂದು ಪಡೆದಿದ್ದರು. ನಮ್ಮ ಸಂಸ್ಥೆಯು ಹಣವನ್ನು ಕನಾರ್ಟಕ ಬ್ಯಾಂಕ ಮೂಲಕ ರೂ. 69,100.00 ಆರೋಪಿಗೆ ಪಾವತಿ ಮಾಡಿದ್ದರು.

3. ಆರೋಪಿ ಸದಸ್ಯನಾಗಿ ಸೇರಿದ್ದಾಗ ಗುಂಪಿನಲ್ಲಿ 25 ಜನರಿದ್ದರು. ಆರೋಪಿಯ ಬಗ್ಗೆ ವಿಚಾರ ಮಾಡಿ ಆತನನ್ನು ಸದಸ್ಯನಾಗಿ ಸೇರಿಸಿದ್ದೆವು. ಆರೋಪಿಯ ಆದಾರ ಕಾರ್ಡ, ಪ್ಯಾನ್ ಕಾರ್ಡ ಮತ್ತು ಪೋಟೊಗಳನ್ನು ಪಡೆದು ಚೀಟಿ ವ್ಯವಹಾರ ದಾಖಲೆಗಳಿಗೆ ಆತನ ಸಹಿ ಪಡೆದಿದ್ದೆವು. ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಕರ್ನಾಟಕ ಬ್ಯಾಂಕ ಮೂಲಕ ಆರೋಪಿಗೆ ಹಣ ಪಾವತಿ ಮಾಡಿದ ಬಗ್ಗೆ ದಾಖಲೆಯನ್ನು ಸಲ್ಲಿಸಿರುತ್ತೇನೆ.

ಸಿ. ಸಿ. ನಂ.- **389/2023**

ಪಿ.ಡಬ್ಲ್ಯೂ. **1**

**4.** ಆರೋಪಿ ಕಡೆಯಿಂದ ರೂ. **69,100.00** ಹಣವನ್ನು ದಿನ, ವಾರ ಮತ್ತು ತಿಂಗಳ ಕಂತಿನ ಮೂಲಕ ಮರುಪಾವತಿ ಮಾಡಿಸಿಕೊಳ್ಳುತ್ತೇವೆ. ಆರೋಪಿಯು ಒಟ್ಟು **25** ತಿಂಗಳ ಕಂತು ಪಾವತಿ ಮಾಡಬೇಕಾಗುತ್ತದೆ. ಸದರಿ ಕಂತುಗಳು ಬಿಡ್ ಆಧಾರದ ಮೇಲೆ ನಿಗಧಿಯಾಗುತ್ತದೆ. ಹಣ ಮರುಪಾವತಿಯನ್ನು ನಾವು ನಗದು, ಚೆಕ್ ಮತ್ತು ನೇಫ್ಟ ಮೂಲಕ ಪಡೆಯುತ್ತೇವೆ. ಆರೋಪಿಯು **19** ಕಂತುಗಳನ್ನು ಪಾವತಿ ಮಾಡಿ ಸುಮಾರು **68** ಸಾವಿರ ಹಣ ಪಾವತಿ ಮಾಡಿರುತ್ತಾರೆ. ಆರೋಪಿಯು ಹಣವನ್ನು ಮರು ಪಾವತಿ ಮಾಡಬೇಕಾಗಿರುವ ಬಗ್ಗೆ ಈ ಪ್ರಕರಣವನ್ನು ದಾಖಲು ಮಾಡಿರುತ್ತೇವೆ. ಆರೋಪಿಯು ರೂ. **24** ಸಾವಿರ ಮೂಲ ಹಣ ಪಾವತಿ ಮಾಡಬೇಕಾಗಿತ್ತು. ಆರೋಪಿಯು ಪೇನಾಲ್ಟಿ ಯ ರೂಪದಲ್ಲಿ ರೂ. **3,420.00** ಹಣ ಪಾವತಿ ಮಾಡಬೇಕಾಗಿತ್ತು. ಹೀಗೆ ಒಟ್ಟು ರೂ. **27,420.00** ಹಣ ಪಾವತಿ ಮಾಡಬೇಕಾಗಿತ್ತು.

**5.** ಆರೋಪಿ ದಿಃ **12.04.2023** ರಂದು ಹಣ ಪಾವತಿ ಸಲುವಾಗಿ ಚೆಕ್ ನ್ನು ನೀಡಿದ್ದರು. ಆರೋಪಿ ಎಲ್ಲಾ ವಿಷಯವನ್ನು ಬರೆದುಕೊಂಡು ನನ್ನ ಮುಂದೆ ಸಹಿ ಮಾಡಿ ಚೆಕ್ ನ್ನು ನೀಡಿದ್ದರು. ಆರೋಪಿ ಚೆಕ್ ನ್ನು ನಮ್ಮ ಆಫೀಸ್ ಗೆ ಬಂದು ನೀಡಿದ್ದರು. ಚೆಕ್ ಮೊತ್ತ ರೂ. **27,420.00** ಆಗಿರುತ್ತದೆ. ಸದರಿ ಚೆಕ್ ನಂಃ **633789** ಆಗಿರುತ್ತದೆ. ಆರೋಪಿ ಕೆನರಾ ಬ್ಯಾಂಕನ ಚೆಕ್ ನೀಡಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರ ಸಂಸ್ಥೆಯಿಂದ ಯಾವುದೆ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಣ ಕೊಡುವುದು ಬಾಕಿ ಇದೆ ಎಂದು ತೋರಿಸಲು ಯಾವುದೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಶ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.